# ನೆನಪಿನಂಗಳದಿಂದ

ಪ್ರವ್ರಾಜಿಕಾ ಭಾರತೀಪ್ರಾಣಾ

**ಕೊ**ಲ್ಕತಾಗೆ ಹಿಂತಿರುಗಿ ಶಾಲೆಯ ವಸತಿಗೃಹದಲ್ಲಿ ಇರತೊಡಗಿದೆ. ಶಾಲೆಯಲ್ಲಿ ನಾನಾ ರೀತಿಯ ಅರಾಜಕತೆ ಶುರುವಾಗಿತ್ತು. ಇದೆಲ್ಲಾ ನನಗೆ ಸ್ವಲ್ಪವೂ ಸರಿತೋರುತ್ತಿರಲಿಲ್ಲ.

ಶರತ್ ಮಹಾರಾಜರ (ಸ್ವಾಮಿ ಶಾರದಾನಂದರು) ಇಚ್ಛೆಯಂತೆ ಮಹಾಮಾಯಾ ಆ ಶಾಲೆಯ ಮೇಲ್ವಿಚಾರಕಳಾಗಿ ಚೆನ್ನಾಗಿ ಕೆಲಸ ಮಾಡುತ್ತಿದ್ದಳು. ಆದರೆ ಆಕೆಗೆ ಕ್ಷಯರೋಗ ಶುರುವಾಯಿತು. ಅವಳು ತುಂಬ ಕಷ್ಟಪಡುತ್ತಿದ್ದಾಳೆಂದು ಕೇಳಿ ನಾನು ಚಪಲಳೊಡನೆ ಅವಳ ಮನೆಗೆ ಹೋದೆ. ಮಹಾಮಾಯಾ ಒಂದೇ ಸಮನೆ ಬೆವರುತ್ತಿದ್ದಳು. ನಾವಿಬ್ಬರೂ ಅವಳ ಪಕ್ಕದಲ್ಲಿ ಸುಮ್ಮನೆ ಕುಳಿತಿದ್ದನ್ನು ನೋಡಿ ಅವಳೆಂದಳು, "ನೀವಿಬ್ಬರೂ ಸುಮ್ಮನೆ ಕೂರುವ ಬದಲು ಸ್ವಲ್ಪ ಗೀತೆಯನ್ನಾದರೂ ಓದಿ." ಚಪಲಾ ಗೀತೆಯನ್ನು ತೆಗೆದುಕೊಂಡು ಬಂದು ಎಲ್ಲಿಂದ ಆರಂಭಿಸಲಿ ಎಂದು ನೋಡುತ್ತಿದ್ದಳು. ಮಹಾಮಾಯಾ ಸನ್ನೆ ಮಾಡಿ ಅವಳನ್ನು ಕರೆದು ಗೀತೆಯ ಒಂದು ಅಧ್ಯಾಯವನ್ನು ತೆರೆದುತೋರಿಸಿದಳು. ಚಪಲಾ ಓದಲಾರಂಭಿಸಿದಳು. ಆ ಅಧ್ಯಾಯ ಮುಗಿದ ನಂತರ ನಮಗೆ ಸ್ವಲ್ಪ ಹೊರಗೆ ಹೋಗುವಂತೆ ಹೇಳಿದಳು. ನೋಡುತ್ತಿದ್ದಂತೆಯೇ ಅವಳು ಕುಳಿತಲ್ಲಿಯೇ ಒರಗಿಕೊಂಡಳು. ತನ್ನ ತಲೆಯ ಹತ್ತಿರವಿದ್ದ ಶ್ರೀಮಾತೆಯ ಚಿತ್ರವನ್ನು ನೋಡುತ್ತಾ, 'ಮಾ ತಾರಾ, ಮಾ ತಾರಾ' ಎಂದು ಹೇಳುತ್ತ ಶರೀರತ್ಯಾಗ ಮಾಡಿದಳು. ಈ ಸುಂದರವಾದ ಮೃತ್ಯುವಿನ ದೃಶ್ಯವನ್ನು ನಾವು ಆಶ್ಚರ್ಯದಿಂದ ನೋಡುತ್ತ ನಿಂತಿದ್ದೆವು. ಮಹಾಮಾಯಾ ಶ್ರೀಮಾತೆಯಿಂದ ದೀಕ್ಷೆ ಪಡೆದಿದ್ದಳು. ಅವಳು ನನ್ನ ಬಾಲ್ಯ ಸ್ನೇಹಿತೆ ಕೂಡ. ಇಬ್ಬರೂ ಸಿಸ್ಟರ್ ನಿವೇದಿತಾರ ವಿದ್ಯಾರ್ಥಿನಿಯರು. ತುಂಬ ನೆನಪುಗಳು ನನ್ನನ್ನು ಕಾಡತೊಡಗಿದವು. ೧೯೨೨ ರಲ್ಲಿ ಶಾಲೆಯನ್ನು ಹಳೆಯ ಕಟ್ಟಡದಿಂದ ಈಗಿನ ಹೊಸ ಕಟ್ಟಡಕ್ಕೆ ಸ್ಥಳಾಂತರಿಸಲಾಯಿತು.

೧೯೨೩ರಲ್ಲಿ ಜಯರಾಂಬಾಟಿಯಲ್ಲಿ ನಡೆಯುವ ಶ್ರೀಮಾತೆಯ ಮಂದಿರದ ಪ್ರತಿಷ್ಠಾಪನೆಗೆ ಬರುವಂತೆ ಸ್ವಾಮಿ ಶಾರದಾನಂದರು ನನಗೆ ಪತ್ರ ಬರೆದರು. ನಾನಾಗ ಪೂರ್ವಬಂಗಾಳದ ಕುಮಿಲ್ಲಾ ಎಂಬ ಜಾಗದಲ್ಲಿದ್ದೆ. ಅಲ್ಲಿ ನನ್ನ ಚಿಕ್ಕಮ್ಮ ಪ್ರಫುಲ್ಲಾ ಮತ್ತು ಗಿರಿಬಾಲಾ ಒಂದು ಶಾಲೆಯನ್ನು ನಡೆಸುತ್ತಿದ್ದರು.

ನಾನು ಪ್ರಫುಲ್ಲರೊಡನೆ ಕೊಲ್ಕತಾಗೆ ಬಂದು, ನಿವೇದಿತಾ ಸ್ಕೂಲಿಗೆ ಹೋದೆ. ಮರುದಿನ ಉದ್ಬೋಧನಕ್ಕೆ ಹೋಗಿ ಬೆಳಿಗ್ಗೆ ೭ ಗಂಟೆಗೆ ಪ್ರಫುಲ್ಲ, ನಾನು, ಚಪಲಾ, ಮೀರಾ, ಯೋಗಿನ್ ಮಾ, ಸಾಧು ಬ್ರಹ್ಮಚಾರಿಗಳು – ಎಲ್ಲರೂ ಸೇರಿ ಸುಮಾರು ೫೦ ಜನ ಸ್ವಾಮಿ ಶಾರದಾನಂದರ ಜೊತೆಗೆ ಜಯರಾಂಬಾಟಿಯತ್ತ ಹೊರಟೆವು. ರೈಲಿನ ಒಂದು ಬೋಗಿ ನಮ್ಮಿಂದಲೇ ತುಂಬಿಹೋಯಿತು. ಸ್ವಾಮಿ ಶಾರದಾನಂದರು ಒಂದು ಬಕೆಟ್ ತುಂಬ ಅವಲಕ್ಕಿ ಹಾಗೂ ಕೆಲವು ಮೊಸರಿನ ಗಡಿಗೆಗಳನ್ನು ತಂದಿದ್ದರು. ಸ್ಟೇಶನ್ನಿನಲ್ಲಿ ಬಾಳೆಹಣ್ಣುಗಳನ್ನು ಕೊಂಡುಕೊಂಡೆವು. ಬಾಳೆಯೆಲೆಯಲ್ಲಿ ಅವಲಕ್ಕಿ, ಮೊಸರು, ಬಾಳೆ ಹಣ್ಣುಗಳನ್ನು ಕಲಸಿ ತಿಂದೆವು. ಮನೆಗಳಿಂದ ಭಕ್ತರು ತಂದ ತಿಂಡಿಗಳನ್ನೂ ಹಂಚಿಕೊಂಡೆವು. ಎಲ್ಲರಿಗೂ ಸಂಭ್ರಮ, ಆನಂದ. ಶರತ್ ಮಹಾರಾಜ್ ಉತ್ಸವದ ದಿನ ರಾತ್ರಿ ಬೆಳಗಲು ದೊಡ್ಡ ಗ್ಯಾಸ್ ದೀಪಗಳನ್ನು ತಂದಿದ್ದರು. ಗರಬೇತಾ ಸ್ಟೇಶನ್ನಿನಲ್ಲಿ ರಾಮಕೃಷ್ಣ ಮಿಷನ್ನಿನ ಅನೇಕ ಜನ ಸಾಧು, ಬ್ರಹ್ಮಚಾರಿಗಳು ನಮ್ಮೆಲ್ಲರಿಗಾಗಿ ಶರಬತ್ ತಂದಿದ್ದರು. ಮಧ್ಯಾಹ್ನ ಎರಡೂವರೆ ಗಂಟೆಗೆ ವಿಷ್ಣುಪುರವನ್ನು ತಲುಪಿದೆವು. ಅಲ್ಲಿ ಸ್ಟೇಷನ್ನಿನಿಂದ ಕೆಲವರು ನಡೆದುಕೊಂಡು, ಮತ್ತೆ ಕೆಲವರು ಎತ್ತಿನ ಗಾಡಿಯಲ್ಲಿ ಒಂದು ಮೈಲಿ ದೂರವಿದ್ದ ಬೋಶೀಶ್ವರ ಸೇನರ ಮನೆಗೆ ಹೋದೆವು. ಅವರ ಮನೆಯಲ್ಲಿ ಊಟ ಮಾಡಿ, ರಾತ್ರಿ ೮–೯ ಗಂಟೆಗೆ ೨೨ ಎತ್ತಿನ ಗಾಡಿಗಳಲ್ಲಿ, ಒಂದೊಂದು ಗಾಡಿಯಲ್ಲಿ ಇಬ್ಬಿಬ್ಬರಂತೆ ಕುಳಿತು, ಕೋಯಲ್‌ಪಾರಾ ಕಡೆ ಹೊರಟೆವು. ಗಾಡಿಗಳು ಚಿಕ್ಕದಾಗಿದ್ದವು, ಎತ್ತುಗಳೂ ಸಣ್ಣ ಆಕೃತಿಯವು. ಶರತ್ ಮಹಾರಾಜ್, ಯೋಗಿನ್ ಮಾ ಹಾಗೂ ಒಂದಿಬ್ಬರು ಸಾಧುಗಳು ಅಲ್ಲೇ ಉಳಿದರು. ಅವರನ್ನು ಜಯರಾಂಬಾಟಿಗೆ ಕರೆದೊಯ್ಯಲು ಬಾಂಕುರಾದಿಂದ ಕಾರು ಬರುವ ವ್ಯವಸ್ಥೆಯಾಗಿತ್ತು. ನಮ್ಮ ಎತ್ತಿನ ಗಾಡಿಗಳು ಮುಂದುವರೆಯುತ್ತಿದ್ದಂತೆ ನಾನು ಅಂದುಕೊಳ್ಳುತ್ತಿದ್ದೆ, "ಈಗ ಶರತ್ ಮಹಾರಾಜರ ಕಾರು ಬಂದು ನಮ್ಮನ್ನು ಹಿಂದಕ್ಕೆ ಹಾಕಿ ಹೊರಟುಹೋಗುತ್ತದೆ" ಎಂದು. ಮರುದಿನ ಬೆಳಿಗ್ಗೆ ೧೧ ಗಂಟೆಗೆ ಕೋಯಲ್‌ಪಾರಾ ತಲುಪಿದ ಮೇಲೂ ಕಾರು ಬರುವ ಚಿಹ್ನೆ ಕಾಣಿಸುತ್ತಿಲ್ಲ! ಎಲ್ಲರೂ ಚಿಂತೆಗೀಡಾದರು. ಆಮೇಲೆ ತಿಳಿಯಿತು ಕಾರು ಸ್ಟಾರ್ಟ್ ಆಗದೆ ಶರತ್ ಮಹಾರಾಜ್ ಮತ್ತು ಇತರರು ಎತ್ತಿನ ಗಾಡಿಯಲ್ಲಿ ಹೊರಟಿದ್ದಾರೆ ಎಂದು. ಮರುದಿನ ಬೆಳಗಿನ ಜಾವ ಶರತ್ ಮಹಾರಾಜ್ ಬಂದು ತಲುಪಿದಾಗ ಎಲ್ಲರೂ ಅವರನ್ನು ಕಂಡು ತಮಾಷೆ



ಜಯರಾಂಬಾಟಿಯಲ್ಲಿನ ಶ್ರೀಮಾತೆಯವರ ಮಂದಿರ

ಮಾಡತೊಡಗಿದರು. ಶರತ್ ಮಹಾರಾಜ್ ನಕ್ಕು ಹೇಳಿದರು, "ಶ್ರೀಮಾತೆ ಈ ರಸ್ತೆಯಲ್ಲಿ ಎಂದೂ ಕಾರಿನಲ್ಲಿ ಬಂದಿರಲಿಲ್ಲ; ಅವರ ದ್ವಾರಪಾಲಕ ಕಾರಿನಲ್ಲಿ ಹೇಗೆ ತಾನೇ ಬರಬಲ್ಲ?"

ದಿನಾಂಕ ೧೯-೪-೧೯೨೩ ರಂದು ಜಯರಾಂಬಾಟಿಯಲ್ಲಿ ಉತ್ಸವ ಜರುಗಿತು. ಕೃಷ್ಣಲಾಲ ಮಹಾರಾಜರ ಮೇಲೆ ಸಂಪೂರ್ಣ ಜವಾಬ್ದಾರಿ ಇತ್ತು. ಪ್ರತಿಯೊಂದು ಕೆಲಸದಲ್ಲೂ ಅವರು ದಕ್ಷರು. ಹಾಗೆಯೇ ಅತ್ಯಂತ ನಿರಭಿಮಾನಿ ಹಾಗೂ ಸರಳ ವ್ಯಕ್ತಿ. ಶರತ್ ಮಹಾರಾಜ್ ಏಳು ಸಲ ಮಂದಿರವನ್ನು ಪ್ರದಕ್ಷಿಣೆ ಮಾಡಿ ಶ್ರೀಮಾತೆಯ ಒಂದು ಸಣ್ಣ ಪಟವನ್ನು ಗರ್ಭಗುಡಿಯಲ್ಲಿ ಪ್ರತಿಷ್ಠಾಪನೆ ಮಾಡಿದರು. ಕಪಿಲ್ ಮಹಾರಾಜ್ ಪೂಜೆ ಮಾಡಿದರು. ಇಡೀ ದಿನ ಸಾಧು, ಭಕ್ತರ ಸೇವೆ ನಡೆಯಿತು. ರಾತ್ರಿ ಜಗದ್ಧಾತ್ರಿ ಪೂಜೆಯಾಯಿತು. ಅನಂತರ ಶರತ್ ಮಹಾರಾಜರು ಕೆಲವರಿಗೆ ಸಂನ್ಯಾಸ, ಬ್ರಹ್ಮಚರ್ಯ ದೀಕ್ಷೆ ಕೊಟ್ಟರು. ಮರುದಿನ ಅನೇಕ ಮಂದಿಗೆ ಮಂತ್ರದೀಕ್ಷೆ ಕೊಟ್ಟರು. ಬೆಳಿಗ್ಗೆ ಆರಂಭಿಸಿದವರು, ಸಂಜೆ ೫ ಗಂಟೆಯ ನಂತರವಷ್ಟೇ ಆಸನದಿಂದ ಮೇಲೆದ್ದರು.

ಜಯರಾಂಬಾಟಿಯ ಉತ್ಸವದ ನಂತರ ನಾನು ಕುಮಿಲ್ಲಾಕ್ಕೆ ಹಿಂತಿರುಗಿದೆ. ಆಗ ಮೇ ತಿಂಗಳು. ಆಗಸ್ಟ್‌ನಲ್ಲಿ ಯೋಗಿನ್ ಮಾ ಅವರ ಆರೋಗ್ಯ ಕೆಟ್ಟಿದ್ದರಿಂದ ಅವರ ಸೇವೆ ಮಾಡಲು ಬರುವಂತೆ ಶರತ್ ಮಹಾರಾಜ್ ನನಗೆ ಪತ್ರ ಬರೆದರು. ಯೋಗಿನ್ ಮಾ ಅವರ ಸೇವೆ ಮಾಡುತ್ತಾ ಸುಮಾರು ಒಂದು ವರ್ಷ ಉದ್ಬೋಧನದಲ್ಲಿದ್ದೆ. ಆ ವರ್ಷ ಹೋಳಿಹಬ್ಬದ ದಿನ ಗ್ರಹಣವಿತ್ತು. ಸಂಜೆ ಯೋಗಿನ್ ಮಾ ಹೇಳಿದರು, "ಸರಳಾ ಗಂಗೆಯ ದಡದಲ್ಲಿ ಕುಳಿತು ಜಪಮಾಡಲಿ. ಗ್ರಹಣ ಮುಗಿದ ಮೇಲೆ ಬರಲಿ. ಸಂಖ್ಯೆ ಇಟ್ಟುಕೊಂಡು ಜಪ ಮಾಡಬೇಕು." ರಾತ್ರಿ ಹತ್ತು ಗಂಟೆಗೆ ನಾನು ಉದ್ಬೋಧನಕ್ಕೆ ಹಿಂತಿರುಗಿ ಊಟ ಮಾಡಿದೆ. ಎಣಿಸಿಕೊಂಡು ಜಪ ಮಾಡುವ ವಿಚಾರವಾಗಿ ಶರತ್ ಮಹಾರಾಜ್ ಯೋಗಿನ್ ಮಾ ರ ಕೋಣೆಯಲ್ಲಿ ನಿಂತುಕೊಂಡು ಮಾತನಾಡುತ್ತಿದ್ದರು.

ಆಗ ಇದ್ದಕ್ಕಿದ್ದಂತೆ ಯೋಗಿನ್ ಮಾ ಸ್ವಾಮಿ ಶಾರದಾನಂದರಿಗೆ ಹೇಳಿದರು, "ಶರತ್, ನೀನು ಸರಳಾಗೆ ಸಂನ್ಯಾಸ ದೀಕ್ಷೆಯನ್ನು ಕೊಟ್ಟುಬಿಡು." ಶರತ್ ಮಹಾರಾಜ್ ನಂತರ ನನ್ನನ್ನು ಕರೆದು ಹೇಳಿದರು, "ನಿನ್ನ ಅದೃಷ್ಟ ಒಳ್ಳೆಯದು. ಯೋಗಿನ್ ಮಾ ತಾವಾಗಿಯೇ ಸಂನ್ಯಾಸದ ಮಾತು ಎತ್ತುತ್ತಿದ್ದಾರೆ. ನಾನೂ ಈ ಬಗ್ಗೆ ಯೋಚಿಸುತ್ತಿದ್ದೆ. ಈಗ ಯೋಗಿನ್ ಮಾ ಹೇಳಿದ ಮೇಲೆ ಇನ್ನು ಯಾವ ತೊಂದರೆಯೂ ಅಡ್ಡಬರದು. ನಾಳೆ ಇಡೀ ದಿನ ಉಪವಾಸವಿರು." ಮರುದಿನ ರಾತ್ರಿ ಸ್ವಾಮಿ ಶಾರದಾನಂದರು ಹೇಳಿದರು, "ಸಮಯ ಬಂದಾಗ ನಿನ್ನನ್ನು ಕರೆಯುತ್ತೇನೆ." ಕಪಿಲ್ ಮಹಾರಾಜ್ ಆಗ ಉದ್ಬೋಧನದಲ್ಲೇ ಇದ್ದರು. ಶರತ್ ಮಹಾರಾಜ್ ಅವರಿಗೆ ಹೋಮದ ವ್ಯವಸ್ಥೆ ಮಾಡುವಂತೆ ಹೇಳಿದರು. ಹರಿಪ್ರೇಮ ಮಹಾರಾಜರಿಗೆ ಆ ದಿನ ಯೋಗಿನ್ ಮಾರ ಸೇವೆ ಮಾಡಲು ಹೇಳಿದ್ದರು. ಇದರ ಕಾರಣ ವೇನೆಂದು ಅವರಿಗೆ ಗೊತ್ತಾಗಿ ಹೋಗಿತ್ತು. ಇನ್ನೂ ಕೆಲವರಿಗೆ ತಿಳಿದಿತ್ತು. ಆದರೆ ಈ ವಿಚಾರವಾಗಿ ಯಾರೂ ಒಂದೂ ಮಾತನಾಡಲಿಲ್ಲ.

ಮರುದಿನ ಯೋಗಿನ್ ಮಾ ಕೇಳಿದರು, "ಸರಳಾ ಈವಾಗಿನಿಂದಲೇ ಕಾವಿಯನ್ನು ಉಡಬೇಕೇ?" ಸ್ವಾಮಿ ಶಾರದಾನಂದರೆಂದರು, "ಬೇಕಾಗಿಲ್ಲ, ಬಿಳಿಯ ಬಟ್ಟೆಯನ್ನೇ ಉಡಲಿ. ಮುಂದೆ ಸಮಯ ಬಂದಾಗ ಎಲ್ಲಾ ಆಗುತ್ತದೆ." ಶರತ್ ಮಹಾರಾಜ್ ನನಗೆ ಸಂನ್ಯಾಸ ದೀಕ್ಷೆ ಕೊಟ್ಟು 'ಶ್ರೀಭಾರತಿ' ಎಂದು ಹೆಸರು ಕೊಟ್ಟರು. ಒಂದು ಕಾವಿಯ ಶಾಲನ್ನು ಕೊಟ್ಟು, "ಈಗ ಸುಮ್ಮನೆ ಇಟ್ಟುಕೊಂಡಿರು. ಮುಂದೆ ಸಮಯ ಬಂದಾಗ ಉಪಯೋಗಿಸು" ಎಂದರು. ಶಾರದಾ ಮಠಕ್ಕೆ ಬಂದ ಮೇಲೆ ಈಗ ಆ ಶಾಲನ್ನು ಉಪಯೋಗಿಸುತ್ತಿದ್ದೇನೆ.

೧೯೨೪ರಲ್ಲಿ ಯೋಗಿನ್ ಮಾ ತೀರಿಕೊಂಡರು. ನಂತರ ಗೋಲಾಪ್ ಮಾ ಅವರ ಸೇವೆ ಮಾಡಲು ಉದ್ಬೋಧನದಲ್ಲೇ ಇದ್ದೆ. ನಂತರ ಗೋಲಾಪ್ ಮಾ ಕೂಡ ತೀರಿಕೊಂಡರು. ಇಬ್ಬರೂ ಹೃತ್ಪೂರ್ವಕವಾಗಿ ನನಗೆ ಆಶೀರ್ವಾದ ಮಾಡಿದರು. ಯೋಗಿನ್ ಮಾ ತಮ್ಮ ದೇಹತ್ಯಾಗಕ್ಕೆ ಮುಂಚೆ ಹೇಳಿದರು, "ಭಗವಂತನನ್ನು ಪಡೆದ ಮೇಲೆ ಇಲ್ಲಿಂದ ಬಾ" ಎಂದು. ಗೋಲಾಪ್ ಮಾ ಕೂಡ ಹೇಳಿದರು, "ನಿನಗೆ ಇಷ್ಟದರ್ಶನವಾಗಲಿ ಎಂದು ನಾನು ಆಶೀರ್ವಾದ ಮಾಡುತ್ತೇನೆ."

(ಮುಂದುವರಿಯುತ್ತದೆ)